S. M. KRISHNA —Certain developments took place when we had to start work on the forge plant. The Government will bear in mind the suggestion of the Hon'ble member. Article 285 does not apply to these category of officers of this Concern.

SRI ABDUL KHUDDUS ANWAR.—Is not desirable to punish those officers who have not implemented the orders of the Government ?

SRI S M. KRISHNA.—The suggestion of the Hon'ble Member is for action.

The Hon'ble Minister for Labour is busy in connection with the visit of the President. Therefore, Question No. 591 may be taken up when he attends the House.

Distribution of seed money to Town Municipal Councils.

597. SRI B. BHYRAPPAJI (Turuvekere).—Will the Minister for Law and Municipal Administration be pleased to state :—

(*a*) seed money distributed to each Town Municipal Councils during the year 1972-73, 1973-74 ;

(*b*) the purpose for which seed money was granted ?

SRI D. K. NAIKAR.— (Minister for Law and Municipal Administration)

(*a*) Seed Capital was sanctioned only during the year 1972-73. For details *Vide* statmeent placed on the Table of the House, *

(*b*) For the purposes of acquisition of lands for the extension of the Town, formation of layouts and distribution of sites to siteless Persons.

ಶ್ರೀ ಬಿ. ಭೈರಪ್ಪಾಜಿ.—ಸ್ವಾಮಿ, ತಾವು ಏನೋ ಮುನಿಸಿಪಾಲಿಟಿಗಳಿಗೆ 1973-74ನೇ ಸಾಲಿಗೆ ಹಣವನ್ನು ಕೊಟ್ಟಿದ್ದೀರಿ ಅದರಲ್ಲಿ ಎಷ್ಟು ಮುನಿಸಿಪಾಲಿಟಿಗಳವರು ಆ ಹಣವನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದಾರೆ, ಮತ್ತೆ ಎಷ್ಟು ಮುನಿಸಿಪಾಲಿಟಿಗಳು ಉಪಯೋಗಿಸಿಕೊಂಡಿಲ್ಲವೆನ್ನುವುದನ್ನು ದಯವಿಟ್ಟು ಹೇಳುತ್ತೀರಾ ?

† ಶ್ರೀ ಡಿ. ಕೆ. ನಾಯ್ಕರ್.—ಸಾಧಾರಣವಾಗಿ ಮೆಜಾರಿಟಿ ಮುನಿಸಿಪಾಲಿಟಿಯವರು ಆ ಹಣವನ್ನು ಲ್ಯಾಂಡ್ ಅಕ್ವಿಜಿಷನ್‌ಗೋಸ್ಕರವಾಗಿ ಉಪಯೋಗ ಮಾಡಿಕೊಂಡಿದ್ದಾರೆ. ಇನ್ನು ಫಿನಾನ್ಸಿಯಲ್ ಪೊಜಿಷನ್ ಸೌಂಡ್ ಇಲ್ಲದಂಥ ಕೆಲವು ಮುನಿಸಿಪಾಲಿಟಿಗಳವರು ಆ ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿಲ್ಲ. ಅದನ್ನು ಸರಿಯಾಗಿ ಉಪಯೋಗ ಮಾಡುವ ಹಾಗೆ ಫುಲ್ ಅಪ್ ಮಾಡುತ್ತಿದ್ದೇವೆ.

ಶ್ರೀ ಬಿ. ಭೈರಪ್ಪಾಜಿ.—ಎಷ್ಟು ಮುನಿಸಿಪಾಲಿಟಿಯವರು ಸರಿಯಾಗಿ ಆ ಹಣವನ್ನು ಉಪಯೋಗಿಸಿಕೊಂಡಿದ್ದಾರೆ ಎನ್ನುವುದನ್ನು ತಾವು ಹೇಳಲಿಲ್ಲ. ಉಪಯೋಗಿಸಿಕೊಳ್ಳದೇ ಇರತಕ್ಕಂಥ ಮುನಿಸಿಪಾಲಿಟಿಯವರು ಯಾವ ಉದ್ದೇಶಕ್ಕೋಸ್ಕರವಾಗಿ ಉಪಯೋಗಿಸಿಕೊಂಡಿಲ್ಲ ? ಆ ರೀತಿ

* Copy placed in the Karnataka legislature library *vide* No. 40, dated 12-4-1976.

ಉಪಯೋಗಿಸಿಕೊಳ್ಳದೇ ಇರತಕ್ಕಂಥ ಮುನಿಸಿಪಾಲಿಟಿಗಳವರಿಗೆ ಕೊಟ್ಟಿರತಕ್ಕಂಥ ಹಣವನ್ನು ವಾಪಸ್ಸು ತೆಗೆದುಕೊಂಡು ಇನ್ನು ಹೆಚ್ಚಿಗೆ ಹಣಪಡೆದು ಖರ್ಚು ಮಾಡಲು ಮುಂದೆ ಬರತಕ್ಕಂಥ ಮುನಿಸಿಪಾಲಿಟಿಯವರಿಗೆ ಅದನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೇ ಸ್ವಾಮಿ ?

ಶ್ರೀ ಡಿ. ಕೆ. ನಾಯ್ಕರ್.—ನಾವು 10 ಸಾವಿರ ರೂಪಾಯಿಗಳನ್ನು ಕೊಟ್ಟರೆ ಅವರು ಅದರ ಜೊತೆಗೆ 10 ಸಾವಿರ ರೂಪಾಯಿಗಳನ್ನು ಹಾಕಿ ಜಂಟಿಯಾಗಿ ಅಕೌಂಟ್ಸ್ ಮಾಡಿ ಸೈಟ್‌ಗಳನ್ನಾಗಿ ಮಾಡಬೇಕು ಎನ್ನುವ ತತ್ವದ ಮೇಲೆಯೇ ನಾವು ಹಣವನ್ನು ಕೊಟ್ಟಿದ್ದೇವೆ. ಆದರೆ ಅಷ್ಟು ಹಣವನ್ನು ಹಾಕಲು ಯೋಗ್ಯತೆ ಇಲ್ಲದೇ ಇರತಕ್ಕಂಥ ಮುನಿಸಿಪಾಲಿಟಿಯವರು ನಾವು ಕೊಟ್ಟಿರತಕ್ಕಂಥ ಹಣವನ್ನು ಬೇರೆ ಕೆಲಸಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಆದುದರಿಂದ ನಾವು ಕೊಟ್ಟಿರತಕ್ಕಂಥ ಹಣವನ್ನು ಸರಿಯಾದ ಕೆಲಸಕ್ಕೆ ಉಪಯೋಗಿಸಬೇಕು. ಬೇರೆ ಕೆಲಸಕ್ಕೆ ಉಪಯೋಗಿಸಬಾರದು ಎನ್ನುವ ಬಗ್ಗೆ ಈಗಾಗಲೇ ನಾವು ತಿಳುವಳಿಕೆಯನ್ನು ಅವರಿಗೆ ಕೊಟ್ಟಿದ್ದೇವೆ.

ಶ್ರೀ ಬಿ ಬೈರಪ್ಪಾಜಿ.—ಕೆಲವು ಮುನಿಸಿಪಾಲಿಟಿಯವರು ಅವರ ಆರ್ಥಿಕ ಸ್ಥಿತಿ ಸರಿಯಾಗಿ ಇಲ್ಲದೇ ಇರುವುದರಿಂದ ಅಂಥ ಮುನಿಸಿಪಾಲಿಟಿಗಳು ಉಪಯೋಗಿಸಿಕೊಂಡಿಲ್ಲವೆಂದು ಹೇಳುತ್ತೀರಿ. ಇಂಥ ಮುನಿಸಿಪಾಲಿಟಿಯವರಿಗೆ ಸ್ವಲ್ಪ ಹಣವನ್ನು ಕೊಟ್ಟು ಹೆಚ್ಚು ಅನಕ್ಕಿಯಿಂದ ಸೈಟ್ ಇಲ್ಲದೇ ತೊಂದರೆ ಪಡುತ್ತಿರತಕ್ಕಂಥ ಕಡೆ ಸೈಟ್‌ಗಳನ್ನು ಹೆಚ್ಚಾಗಿ ಮಾಡಲು ಅನುಕೂಲವಾಗುವಂತೆ ಮಾಡಲು ಅನಕ್ಕಿ ಇರುವಂಥ ಮುನಿಸಿಪಾಲಿಟಿಗಳಿಗೆ ಸ್ವಲ್ಪ ಹೆಚ್ಚು ಹಣವನ್ನು ಕೊಡಲು ವ್ಯವಸ್ಥೆ ಮಾಡುತ್ತೀರಾ ಸ್ವಾಮಿ ?

ಶ್ರೀ ಡಿ ಕೆ. ನಾಯ್ಕರ್.—ಬಹುಶಃ ಮಾನ್ಯ ಸದಸ್ಯರು ಬಡ್ಜೆಟ್ ಭಾಷಣವನ್ನು ಓದಿದರೆ ಅರ್ಥವಾಗುತ್ತದೆ. 2.2 ಕ್ಯೋರ್ಸ್ ಸೈಟ್‌ಲೆಸ್ ಪರ್ಸನ್ಸ್‌ಗೆ ಶೇಕಡ 75 ಸಬ್ಸಿಡಿಕೊಟ್ಟು, 12ವರೆ ಪರ್ಸೆಂಟ್ ಲೋನ್ ಮತ್ತು 12ವರೆ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟು ಆ ಕೆಲಸವನ್ನು ಮಾಡಬೇಕು ಎನ್ನತಕ್ಕ ತತ್ವವನ್ನು ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ. ಆದುದರಿಂದ ನಾವು ಎಲ್ಲ ವಿಷಯವನ್ನೂ ಸವಿಸ್ತಾರವಾಗಿ ಪರಿಶೀಲನೆ ಮಾಡಿ ಎಲ್ಲರಿಗೂ ಅನುಕೂಲವಾಗುವಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು 1972-73ನೇ ಸಾಲಿನಲ್ಲಿ ಹಣವನ್ನು ಏನೋ ಕೊಟ್ಟಿದ್ದೀರಿ, ಆದರೆ ಅದರಲ್ಲಿ ಕೆಲವು ಮುನಿಸಿಪಾಲಿಟಿಗಳು ಜಂಟಿಯಾಗಿ ಅಕೌಂಟ್ಸ್ ಮಾಡಿಕೊಳ್ಳಲು ಕ್ರಮ ತೆಗೆದುಕೊಂಡಿಲ್ಲವೆಂದು ತಿಳಿಸಿದ್ದೀರಿ ಅಂಥ ಮುನಿಸಿಪಾಲಿಟಿಗಳು ತಮ್ಮ ಪಟ್ಟಿಯಲ್ಲಿ ಎಷ್ಟಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಆ ಅಂಕಿಸಂಖ್ಯೆಗಳು ನನ್ನಲ್ಲಿ ಈಗ ಇಲ್ಲ. ಸಾಧಾರಣವಾಗಿ ಶೇಕಡ 90 ಮುನಿಸಿಪಾಲಿಟಿಗಳು ಈಗಾಗಲೇ ಆ ಕೆಲಸವನ್ನು ಮಾಡಿವೆ.

ಶ್ರೀ ಬಿ. ಬೈರಪ್ಪಾಜಿ.—ಶೇಕಡ 90 ಭಾಗ ಮಾತ್ರ ಕೆಲಸ ಮಾಡಿವೆ ಎಂದು ಹೇಳಿದಿರಿ, ಬಾಕಿ ಉಳಿದ ಶೇಕಡ 10 ಭಾಗದವರು ಜಂಟಿಯಾಗಿ ಅಕೌಂಟ್ಸ್ ಮಾಡಿಕೊಳ್ಳದೇ ಇರುವುದರಿಂದ ಅನೇಕ ಆತಂಕಗಳು ಉಂಟಾಗಿವೆ. ಅವುಗಳನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ತಾವು ಸರಿಯಾದ ವ್ಯವಸ್ಥೆ ಮಾಡುವುದಕ್ಕಾಗುತ್ತದೆ. ಹಣ ಇಲ್ಲದೇ ಇರುವಂಥ ಮುನಿಸಿಪಾಲಿಟಿಗಳಿಗೆ ಹೆಚ್ಚು ಹಣ ಕೊಟ್ಟು ಅಲ್ಲಿ ಕೆಲಸಗಳು ಆದಷ್ಟು ಬೇಗ ಸರ್ಕಾರದ ಉದ್ದೇಶದ ಪ್ರಕಾರ ಆಗುವಂತೆ ಮಾಡಲು ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ಹೇಗೆ ಸ್ವಾಮಿ ?

ಶ್ರೀ ಡಿ. ಕೆ. ನಾಯ್ಕರ್.—ಈಗಾಗಲೇ ನಾನು ಸ್ಪಷ್ಟಪಡಿಸಿದ್ದೇನೆ. ಸರ್ಕಾರದ ಉದ್ದೇಶ ಈಡೇರುವಂತೆ ಆಗಲು ಸೂಕ್ತ ಕ್ರಮ ತೆಗೆದುಕೊಳ್ಳಲು ಈಗಾಗಲೇ ತಿಳಿಸಿದ್ದೇವೆ.